# ಶ್ರೀರಾಮರಕ್ಷಾಸ್ತೋತ್ರ, ಮಾರುತಿಸ್ತೋತ್ರ ಮತ್ತು ಹನುಮಾನ ಚಾಲೀಸಾ (ಅರ್ಥಸಹಿತ)

## ಮನೋಗತ

ನಮ್ಮಲ್ಲಿ ಮನೆಮನೆಗಳಲ್ಲಿ ಸಾಯಂಕಾಲ ದೇವರ ಮುಂದೆ ದೀಪವನ್ನು ಹಚ್ಚಿದ ನಂತರ 'ಶುಭಂ ಕರೋತಿ'ಯೊಂದಿಗೆ ಶ್ರೀರಾಮರಕ್ಷಾಸ್ತೋತ್ರ ಮತ್ತು ಮಾರುತಿಸ್ತೋತ್ರಗಳನ್ನು ಹೇಳುವ ಪದ್ಧತಿಯಿದೆ. ಈ ಕಿರುಗ್ರಂಥದಲ್ಲಿ ಎರಡೂ ಸ್ತೋತ್ರಗಳನ್ನು ಅರ್ಥಸಹಿತ ಕೊಡಲಾಗಿದೆ; ಹಾಗೆಯೇ ಕೆಲವು ಮಹತ್ವದ ಅಧ್ಯಾತ್ಮಶಾಸ್ತ್ರೀಯ ಸಿದ್ಧಾಂತಗಳನ್ನೂ ಕೊಡಲಾಗಿದೆ. ಇದರಲ್ಲಿನ ಪಾರಿಭಾಷಿಕ ಶಬ್ದ ಮತ್ತು ಈ ದೇವತೆಗಳ ಕುರಿತು ಅಧ್ಯಾತ್ಮಶಾಸ್ತ್ರೀಯ ದೃಷ್ಟಿಕೋನದಿಂದ ಬರೆಯಲಾದ ಸವಿಸ್ತಾರ ಮಾಹಿತಿಯನ್ನು ಸನಾತನದ 'ಶ್ರೀರಾಮ' ಮತ್ತು 'ಮಾರುತಿ' ಈ ಕಿರುಗ್ರಂಥಗಳಲ್ಲಿ ಕೊಡಲಾಗಿದೆ.

ಮೊದಲು ಶ್ರೀರಾಮ ಮತ್ತು ಮಾರುತಿ ಈ ದೇವತೆಗಳ ಬಗ್ಗೆ ಕೆಲವು ಅಂಶಗಳನ್ನು ತಿಳಿದುಕೊಳ್ಳೋಣ. ಹೆಚ್ಚಿನ ಜನರಿಗೆ ದೇವರ ಬಗ್ಗೆ ಯಾವ ಅಲ್ಪಸ್ವಲ್ಪ ಮಾಹಿತಿ ಇರುತ್ತದೆಯೋ, ಅದು ಬಹುಶಃ ಚಿಕ್ಕಂದಿನಲ್ಲಿ ಅವರು ಓದಿದ ಅಥವಾ ಕೇಳಿದ ಕಥೆಗಳಿಂದ ಬಂದಿರುತ್ತದೆ. ಇಂತಹ ಅಲ್ಪ ಮಾಹಿತಿಯಿಂದಾಗಿ ದೇವರ ಮೇಲಿನ ಅವರ ಶ್ರದ್ಧೆಯೂ ಅಲ್ಪಸ್ವಲ್ಪವೇ ಇರುತ್ತದೆ. ದೇವರ ಬಗ್ಗೆ ಹೆಚ್ಚು ಮಾಹಿತಿ ದೊರೆತಲ್ಲಿ ಹೆಚ್ಚು ಶ್ರದ್ಧೆ ನಿರ್ಮಾಣವಾಗಲು ಸಹಾಯವಾಗುತ್ತದೆ. ಇದರಿಂದಾಗಿ ಸಾಧನೆಯೂ ಒಳ್ಳೆಯ ರೀತಿಯಲ್ಲಿ ಆಗುತ್ತದೆ. ಹಾಗಾಗಬೇಕೆಂದು ಈ ಕಿರುಗ್ರಂಥದಲ್ಲಿ ಇತರೆಡೆ ಬಹುಶಃ ಕೊಡದೇ ಇರುವ ಉಪಯುಕ್ತ ಮಾಹಿತಿಯನ್ನು ಕೊಡಲಾಗಿದೆ; ಅದನ್ನು ತಿಳಿದುಕೊಳ್ಳೋಣ.

### ೧. ಶ್ರೀರಾಮ

ಇವನು ಭಗವಾನ್ ಶ್ರೀವಿಷ್ಣುವಿನ ಏಳನೇ ಅವತಾರನಾಗಿದ್ದಾನೆ.

**೧ ಅ. ತತ್ತ್ವ :** ವಿಷ್ಣುತತ್ತ್ವ ಶೇ. ೭೫ (ವಿಷ್ಣು / ಈಶ್ವರ = ಶೇ. ೧೦೦).

**೧ ಆ. ಕ್ಷಮತೆ :** ಎಲ್ಲರಲ್ಲಿ ಉತ್ಪತ್ತಿ, ಸ್ಥಿತಿ ಮತ್ತು ಲಯ ಎಂಬ ಮೂರು ವಿಧದ ಮೂಲಭೂತ ಕಾರ್ಯಗಳಿರುತ್ತವೆ. ರಾಮನ ಒಟ್ಟು ಕ್ಷಮತೆಯಲ್ಲಿನ ಶೇ. ೨೦ ರಷ್ಟು ಉತ್ಪತ್ತಿಗಾಗಿ, ಶೇ. ೫೦ ರಷ್ಟು ಸ್ಥಿತಿಗಾಗಿ ಮತ್ತು ಶೇ. ೩೦ ರಷ್ಟನ್ನು ಲಯದ ಕಾರ್ಯಕ್ಕಾಗಿ ಉಪಯೋಗಿಸಲಾಗುತ್ತದೆ.

**೧ ಇ. ಪ್ರಕಟಶಕ್ತಿ :** ಶೇ. ೭೫. (ಸಾಮಾನ್ಯವಾಗಿ ದೇವತೆಗಳಲ್ಲಿ ಪ್ರಕಟಶಕ್ತಿ ಕೇವಲ ಶೇ. ೧೦ ರಷ್ಟಿರುತ್ತದೆ.) ಶ್ರೀರಾಮನು ಕಾರ್ಯವನ್ನು ಮಾಡಲು ಕೇವಲ ಶೇ. ೭೫ ರಷ್ಟು ಶಕ್ತಿಯನ್ನು ಮಾತ್ರ ಉಪಯೋಗಿಸುತ್ತಾನೆ. ಈ ಶಕ್ತಿಗೆ 'ಪ್ರಕಟ ಶಕ್ತಿ' ಎಂದು ಹೇಳುತ್ತಾರೆ. ಉಪಯೋಗಿಸದಿರುವ ಶಕ್ತಿಗೆ 'ಅಪ್ರಕಟ ಶಕ್ತಿ' ಎಂದು ಹೇಳುತ್ತಾರೆ. ಕಾರ್ಯಕ್ಕನುಸಾರ ಹೆಚ್ಚು ಶಕ್ತಿಯನ್ನು ಉಪಯೋಗಿಸುವುದು ಆವಶ್ಯಕವಿದ್ದಲ್ಲಿ ಪ್ರಕಟಶಕ್ತಿಯು ಹೆಚ್ಚಿರುತ್ತದೆ.

ರಾವಣನು ಮಹಾನ್ ಶಿವಭಕ್ತನಾಗಿದ್ದರಿಂದ ಸಾಧನೆಯ ಬಲದಿಂದಾಗಿ ಅವನ ಆಧ್ಯಾತ್ಮಿಕ ಸಾಮರ್ಥ್ಯವೂ ಹೆಚ್ಚಿತ್ತು. ರಾವಣನಂತಹ ಸಾಮರ್ಥ್ಯವಂತ ಅಸುರನನ್ನು ನಾಶಗೊಳಿಸಲು ಶ್ರೀರಾಮನ ಅವತಾರವಾಗಿದ್ದರಿಂದ ಅವನ ಪ್ರಕಟಶಕ್ತಿಯು ಅಧಿಕವಾಗಿದೆ.

## ೨. ಮಾರುತಿ

**೨ ಅ. ತತ್ತ್ವ :** ವಿಷ್ಣುತತ್ತ್ವ ಶೇ. ೭೦, ಶಿವತತ್ತ್ವ ಶೇ. ೧೦ (ವಿಷ್ಣು / ಶಿವ / ಈಶ್ವರ = ಶೇ. ೧೦೦) ಮಾರುತಿಯು ಶಿವನ ಅವತಾರವಾಗಿದ್ದರೂ ರಾಮನ ಉಪಾಸನೆಯಿಂದಾಗಿ ಅವನಲ್ಲಿ ವಿಷ್ಣುತತ್ತ್ವ ಹೆಚ್ಚಿದೆ.

**೨ ಆ. ಕ್ಷಮತೆ :** ಉತ್ಪತ್ತಿ ಶೇ. ೧೦, ಸ್ಥಿತಿ ಶೇ. ೭೦ ಮತ್ತು ಲಯ ಶೇ. ೨೦.

**೨ ಇ. ಪ್ರಕಟಶಕ್ತಿ :** ಶೇ. ೭೨. ಮಾರುತಿಯಲ್ಲಿನ ಪ್ರಕಟಶಕ್ತಿಯು ಇತರ ದೇವತೆಗಳ (ಶೇ. ೧೦) ತುಲನೆಯಲ್ಲಿ ಅತ್ಯಂತ ಹೆಚ್ಚಿರುವುದರಿಂದ ಶಕ್ತಿಯ ಬಗೆಗಿನ ಮುಂದಿನ ಕಾರಣಗಳಿಗಾಗಿ ಮಾರುತಿಯ ಉಪಾಸನೆಯನ್ನು ಮಾಡುತ್ತಾರೆ.

೧. ಮಾರುತಿಯ ದಾಸಮಾರುತಿ ಮತ್ತು ವೀರಮಾರುತಿ ಎಂಬ ಎರಡು ರೂಪಗಳಿವೆ. ದಾಸಮಾರುತಿಯು ರಾಮನ ಮುಂದೆ ಕೈಜೋಡಿಸಿ ನಿಂತಿರುತ್ತಾನೆ. ಅವನ ಬಾಲವು ನೆಲದ ಮೇಲಿರುತ್ತದೆ. ವೀರಮಾರುತಿಯು ಯುದ್ಧದ ಭಂಗಿಯಲ್ಲಿ ಇರುತ್ತಾನೆ. ಅವನ ಬಾಲವು ಮೇಲಕ್ಕೆ ನಿಂತಿರುತ್ತದೆ ಮತ್ತು ಬಲಗೈ ಮಸ್ತಕದೆಡೆಗೆ ತಿರುಗಿರುತ್ತದೆ. ಕೆಲವೊಮ್ಮೆ ಅವನ ಕಾಲಿನಡಿಯಲ್ಲಿ ರಾಕ್ಷಸನ ಮೂರ್ತಿಯಿರುತ್ತದೆ. ಲಂಕೆಯಲ್ಲಿ ಲಕ್ಷಗಟ್ಟಲೆ ರಾಕ್ಷಸರಿದ್ದರು, ಆದರೆ ಅವರಿಗೆ ಮಾರುತಿಗೆ ಏನೂ ಮಾಡಲು ಸಾಧ್ಯವಾಗಲಿಲ್ಲ.

೨. ಒಳ್ಳೆಯ ಶಕ್ತಿಗಳ ಮೇಲೆ ನಿಯಂತ್ರಣ : ಜಾಗೃತ ಕುಂಡಲಿನಿಯ ಮಾರ್ಗದಲ್ಲಿ ಅಡಚಣೆ ಬಂದರೆ ಅದನ್ನು ದೂರಗೊಳಿಸಿ ಅದಕ್ಕೆ ಯೋಗ್ಯ ದಿಶೆಯನ್ನು ನೀಡಲು ಮಾರುತಿಯ ಉಪಾಸನೆಯನ್ನು ಮಾಡುತ್ತಾರೆ.

೩. ಕೆಟ್ಟ ಶಕ್ತಿಗಳ ನಿವಾರಣೆ : ಎಲ್ಲ ದೇವತೆಗಳಲ್ಲಿ ಕೇವಲ ಮಾರುತಿಗೆ ಮಾತ್ರ ಕೆಟ್ಟ ಶಕ್ತಿಗಳು ತೊಂದರೆ ಕೊಡುವುದಿಲ್ಲ. ಮಾರುತಿಯು ಭೂತಗಳ ಸ್ವಾಮಿಯಾಗಿದ್ದಾನೆ. ಇದರಿಂದಾಗಿ ಯಾರಿಗಾದರೂ ಭೂತಗಳು (ದೆವ್ವಗಳು) ಹಿಡಿದರೆ ಆ ವ್ಯಕ್ತಿಯನ್ನು ಮಾರುತಿಯ ದೇವಸ್ಥಾನಕ್ಕೆ ಕರೆದುಕೊಂಡು ಹೋಗುತ್ತಾರೆ ಅಥವಾ ಹನುಮಾನ್ ಚಾಲಿಸಾವನ್ನು ಹೇಳುತ್ತಾರೆ. ಭೂತ, ಮಾಟ, ಪೂರ್ವಜರ ಲಿಂಗದೇಹಗಳು, ಶನಿಗ್ರಹಪೀಡೆ ಮುಂತಾದ ತೊಂದರೆಗಳನ್ನು

ದೂರಗೊಳಿಸಲು ವೀರಮಾರುತಿಯ ಉಪಾಸನೆಯನ್ನು ಮಾಡುತ್ತಾರೆ. ಹನುಮಾನ್ ಚಾಲಿಸಾದಲ್ಲಿ ದಾಸಮಾರುತಿ ಮತ್ತು ವೀರಮಾರುತಿಯ ವರ್ಣನೆಯಿದೆ.

## ೩. ಸ್ತೋತ್ರಗಳ ರಚನಾಕಾರರು

ರಾಮರಕ್ಷಾಸ್ತೋತ್ರವನ್ನು ಬುಧಕೌಶಿಕಋಷಿಗಳು ಮತ್ತು ಹನುಮಾನ್ ಚಾಲಿಸಾವನ್ನು ಸಂತ ತುಳಸಿದಾಸರು ರಚಿಸಿದ್ದಾರೆ. ಆತ್ಮಜ್ಞಾನಸಂಪನ್ನ ಋಷಿ ಮುನಿಗಳು ಮತ್ತು ಸಾಧು ಸಂತರಿಗೆ ಈ ವಾಙ್ಮಯವು ಪರಾವಾಣಿಯಲ್ಲಿ ಹೊಳೆ ಯುತ್ತದೆ. ಈ ಅವಸ್ಥೆಯಲ್ಲಿ ಅವರು ಈಶ್ವರನೊಂದಿಗೆ ಸಂಪೂರ್ಣ ಅದ್ವೈತ ರಾಗಿರುವುದರಿಂದ ಮತ್ತು ಇವೆಲ್ಲವನ್ನೂ ಮಾಡಿಸುವವನು ಈಶ್ವರನೇ ಆಗಿದ್ದಾನೆ, ಎಂಬ ಅನುಭೂತಿಯಿಂದಾಗಿ 'ರಾಮರಕ್ಷಾಸ್ತೋತ್ರವನ್ನು ಶಿವನು ಸ್ವಪ್ನಾವಸ್ಥೆ ಯಲ್ಲಿ ಹೇಳಿದ್ದಾನೆ' ಎಂದು ಬುಧಕೌಶಿಕಋಷಿಗಳು ಬರೆದಿರುವುದು ಕಂಡುಬರುತ್ತದೆ.

## ೪. ಮಂತ್ರ, ಕೀಲಕ, ಸ್ತೋತ್ರ ಮತ್ತು ಕವಚ

**೪ ಅ. ಮಂತ್ರ :** ಅಧ್ಯಾತ್ಮವಾಙ್ಮಯದಲ್ಲಿ ಮಂತ್ರಯೋಗಕ್ಕೆ ಬಹಳ ಮಹತ್ವವಿದೆ. ಶ್ರೀರಾಮರಕ್ಷಾಸ್ತೋತ್ರವು ಮಂತ್ರವೇ ಆಗಿದೆ. ರಾಮರಕ್ಷಾಸ್ತೋತ್ರದ ಪ್ರಾರಂಭದಲ್ಲಿ 'ಅಸ್ಯ ಶ್ರೀರಾಮರಕ್ಷಾಸ್ತೋತ್ರ ಮಂತ್ರಸ್ಯ' ಎಂದು ಹೇಳಲಾಗಿದೆ. ಮಂತ್ರ ಶಬ್ದದ ಕೆಲವು ವ್ಯಾಖ್ಯೆಗಳು ಮುಂದಿನಂತಿವೆ.

೧. 'ಮನನಾತ್ ತ್ರಾಯತೆ ಇತಿ ಮಂತ್ರಃ ।' ಮನನವೆಂದರೆ ಒಂದೇ ವಿಚಾರವನ್ನು ಪದೇಪದೇ ಮನಸ್ಸಿನಲ್ಲಿ ತರುವುದು ಮತ್ತು ತ್ರಾಯತೆ ಅಂದರೆ ರಕ್ಷಿಸುವುದು; ಆದುದರಿಂದ ಯಾವುದನ್ನು ಮನನ ಮಾಡುವುದರಿಂದ ನಮ್ಮ

ರಕ್ಷಣೆಯಾಗುತ್ತದೆಯೋ, ಅದಕ್ಕೆ 'ಮಂತ್ರ' ಎಂದು ಹೇಳುತ್ತಾರೆ. ಇದರ ಇನ್ನೊಂದು ಅರ್ಥವೆಂದರೆ ಯಾವುದು ನಮ್ಮನ್ನು ನಮ್ಮ 'ಮನಸ್ಸಿನಿಂದ' ರಕ್ಷಣೆ ಮಾಡುತ್ತದೆಯೋ, ಅಂದರೆ ಮನಸ್ಸನ್ನು ಇಲ್ಲದಂತೆ ಮಾಡಲು ಸಹಾಯ ಮಾಡುತ್ತದೆಯೋ ಅದುವೇ ಮಂತ್ರ.

೨. ಮಂತ್ರವೆಂದರೆ ಇಷ್ಟಸಾಧಕ ಮತ್ತು ಅನಿಷ್ಟನಿವಾರಕ ವರ್ಣಸಮೂಹ.

೩. ಮಂತ್ರವೆಂದರೆ ಒಂದು ನಾದ / ಧ್ವನಿ, ಒಂದು ಅಕ್ಷರ, ಒಂದು ಶಬ್ದ ಅಥವಾ ಶಬ್ದಗಳ ಸಮೂಹ. ನಿರ್ಧರಿತ ಲಯದಲ್ಲಿ ಮತ್ತು ಸ್ವರದಲ್ಲಿ ಯಾವುದಾದರೊಂದು ಮಂತ್ರವನ್ನು ಜಪಿಸಿದರೆ ಆ ಜಪದಿಂದ ಒಂದು ವಿಶಿಷ್ಟ ಶಕ್ತಿಯು ನಿರ್ಮಾಣವಾಗುತ್ತದೆ. ಆದುದರಿಂದ ರಾಮರಕ್ಷಾಸ್ತೋತ್ರವನ್ನು ವಿಶಿಷ್ಟ ಲಯದಲ್ಲಿ ಹೇಳುವುದು ಆವಶ್ಯಕವಾಗಿದೆ.

ರಾಮರಕ್ಷಾದ ಆರಂಭದಲ್ಲಿ 'ಅನುಷ್ಟುಪ್ ಛಂದಃ' ಎಂದು ಹೇಳಲಾಗಿದ್ದರೂ ಅದರಲ್ಲಿನ ಎಲ್ಲ ಶ್ಲೋಕಗಳು ಈ ಛಂದಸ್ಸಿನಲ್ಲಿಲ್ಲ; ಆದರೆ ಹೆಚ್ಚಿನ ಶ್ಲೋಕಗಳು ಈ ಛಂದಸ್ಸಿನಲ್ಲಿವೆ.

ಮಂತ್ರಗಳನ್ನು ತದರ್ಥಭಾವಪೂರ್ವಕ ನಿಷ್ಠೆಯಿಂದ ಪುನಃ ಪುನಃ (ಸ್ತೋತ್ರ ದಲ್ಲಿ ಕೊಟ್ಟಿರುವಂತೆ) ಆವರ್ತಿಸುವುದನ್ನು 'ಮಂತ್ರ ಜಪ' ಎನ್ನುತ್ತಾರೆ. 'ತದರ್ಥ ಭಾವಪೂರ್ವಕ = ತತ್ + ಅರ್ಥ + ಭಾವಪೂರ್ವಕ, ಅಂದರೆ ಅದರ (ಮಂತ್ರದ) ಅರ್ಥವನ್ನು ತಿಳಿದುಕೊಂಡು ಭಾವದೊಂದಿಗೆ'. ಕೇವಲ ಯಂತ್ರದಂತೆ ಮಂತ್ರದ ಪ್ರಾಣಹೀನ ಉಚ್ಚಾರ ಮಾಡುವುದೆಂದರೆ ಜಪವಲ್ಲ. ಮಂತ್ರೋಚ್ಚಾರದಿಂದ ಜಪಕರ್ತನು ಭಗವದ್‌ಭಾವಯುಕ್ತ ಮತ್ತು ಭಗವಚ್ಛಕ್ತಿಯುಕ್ತನಾಗಬೇಕು.

**೪ ಆ. ಕೀಲಕ :** ಯಾರಾದರೊಬ್ಬ ಋಷಿಗಳು ಯಾವುದಾದರೊಂದು ಮಂತ್ರವನ್ನು ನಿರ್ಮಾಣ ಮಾಡಿದರೆ ಮತ್ತು 'ಇಂತಹ ಒಂದು ಶಬ್ದದ ಉಚ್ಚಾರವನ್ನು ಆ ಮಂತ್ರೋಚ್ಚಾರದ ಮೊದಲು ಮಾಡದೇ ಇದ್ದಲ್ಲಿ ಆ ಮಂತ್ರವು ಫಲದಾಯಕವಾಗುವುದಿಲ್ಲ', ಎಂಬ ಪೂರ್ವಸೂಚನೆಯನ್ನು ಕೊಟ್ಟಿದ್ದಲ್ಲಿ ಕೇವಲ ಆ ಮಂತ್ರವನ್ನು ಹೇಳಿದರೆ ಅದರ ಉಪಯೋಗವಾಗುವುದಿಲ್ಲ. ಇಂತಹ ಶಬ್ದವನ್ನು ಆ ಮಂತ್ರದ 'ಕೀಲಕ' ಅಂದರೆ ಕೀಲು ಎನ್ನುತ್ತಾರೆ. ಆ ಶಬ್ದದೊಂದಿಗೆ ಆ ಮಂತ್ರವನ್ನು ಹೇಳಿದರೆ ಮಾತ್ರ ಅದು ಫಲದಾಯಕವಾಗುತ್ತದೆ.

**೪ ಇ. ಸ್ತೋತ್ರ :** 'ಸ್ತೂಯತೇ ಅನೇನ ಇತಿ' ಅಂದರೆ ಯಾವುದರಿಂದ ದೇವತೆಯನ್ನು ಸ್ತುತಿಸಲಾಗುತ್ತದೆಯೋ ಅದು ಸ್ತೋತ್ರ, ಹೀಗೆ ಸ್ತೋತ್ರ ಶಬ್ದದ ವ್ಯಾಖ್ಯೆಯಿದೆ. ಸ್ತೋತ್ರದಲ್ಲಿ ದೇವತೆಯ ಸ್ತುತಿಯೊಂದಿಗೆ ಸ್ತೋತ್ರ ಪಠಿಸುವವನ ಸುತ್ತಲೂ ಕವಚವನ್ನು (ರಕ್ಷಣಾ ಕವಚ) ನಿರ್ಮಿಸುವ ಶಕ್ತಿಯೂ ಇರುತ್ತದೆ.

ಸ್ತೋತ್ರದಲ್ಲಿ ಕೊಟ್ಟ ಫಲಶ್ರುತಿಯ ಹಿಂದೆ ರಚನಾಕಾರರ ಸಂಕಲ್ಪವಿರುವುದ ರಿಂದ ಪಠಿಸುವವನಿಗೆ ಫಲಶ್ರುತಿಯಿಂದಾಗಿ ಫಲ ಸಿಗುತ್ತದೆ.

**೪ ಈ. ಕವಚ :** ಕವಚವು ಮಂತ್ರವಿದ್ಯೆಯ ಒಂದು ವಿಧವಾಗಿದೆ. ಇದರಲ್ಲಿ 'ದೇವತೆಯು ನಮ್ಮ ಶರೀರವನ್ನು ರಕ್ಷಿಸಬೇಕು', ಎಂದು ಪ್ರಾರ್ಥನೆಯಿರುತ್ತದೆ. ರಾಮರಕ್ಷಾದಲ್ಲಿನ ರಾಮಕವಚದಂತೆಯೇ ಶಿವಕವಚ, ಹನುಮತ್ಕವಚ ಇತ್ಯಾದಿ ಕವಚಗಳು ಪ್ರಸಿದ್ಧವಾಗಿವೆ. ಮಂತ್ರಗಳ ಸಹಾಯದಿಂದ ಮಾನವನ ದೇಹದ ಮೇಲೆ ಮಂತ್ರ ಕವಚವನ್ನು ನಿರ್ಮಿಸಬಹುದು. ಈ ಕವಚಗಳು ಸ್ಥೂಲ ಕವಚಕ್ಕಿಂತ ಹೆಚ್ಚು ಶಕ್ತಿಶಾಲಿಯಾಗಿರುತ್ತವೆ. ಸ್ಥೂಲ ಕವಚಗಳು ಬಂದೂಕಿನ ಗುಂಡುಗಳಂತಹ ಸ್ಥೂಲ ಆಯುಧಗಳಿಂದ ರಕ್ಷಿಸುತ್ತವೆ; ಆದರೆ ಸೂಕ್ಷ್ಮ

ಕವಚಗಳು ಸ್ಥೂಲ, ಹಾಗೆಯೇ ಭೂತ, ಮಾಟಗಳಂತಹ ಸೂಕ್ಷ್ಮ ಕೆಟ್ಟ ಶಕ್ತಿಗಳಿಂದ ರಕ್ಷಿಸುತ್ತವೆ.

'ಶಬ್ದದ ಕೊನೆಯಲ್ಲಿ ಅನುಸ್ವಾರವಿದ್ದು ಮುಂದಿನ ಶಬ್ದದ ಮೊದಲ ಅಕ್ಷರವು ವ್ಯಂಜನವಾಗಿದ್ದರೆ ಅನುಸ್ವಾರವನ್ನು 'ಂ' ನಿಂದ ತೋರಿಸಬೇಕು', ಹೀಗೆ ಸಂಸ್ಕೃತವನ್ನು ಬರೆಯುವ ಪದ್ಧತಿ ಇದ್ದರೂ, ಈ ಕಿರುಗ್ರಂಥದಲ್ಲಿ ರಾಮರಕ್ಷಾ ಸ್ತೋತ್ರವನ್ನು ಕೊಡುವಾಗ ಅನುಸ್ವಾರಗಳನ್ನು ಆದಷ್ಟು ಣ್, ನ್, ಮ್ ಮುಂತಾದ ಅನುನಾಸಿಕಗಳಿಂದ ತೋರಿಸಲಾಗಿದೆ. ಆದರೆ ಕೆಲವು ಕಡೆಗಳಲ್ಲಿ ಙ್, ಞ್ ಅನುನಾಸಿಕಗಳನ್ನು ಹಾಕಿದರೆ ಓದಲು ಕಷ್ಟವಾಗುವುದೆಂದು ಅನುಸ್ವಾರಗಳನ್ನು ಹಾಕಲಾಗಿದೆ. ಸಂಸಾರ ಇತ್ಯಾದಿ ಶಬ್ದಗಳಲ್ಲಿನ ಅನುಸ್ವಾರವನ್ನು ಅನುನಾಸಿಕಗಳಲ್ಲಿ ತೋರಿಸುವುದು ಸಾಧ್ಯವಿಲ್ಲದಿರುವುದರಿಂದ ಆ ಸ್ಥಳದಲ್ಲಿ ಅನುಸ್ವಾರವನ್ನೇ ಇಡಲಾಗಿದೆ. ಸ್ತೋತ್ರವನ್ನು ಹೇಳುವಾಗ ನಾವು ಎಲ್ಲಿ ಸ್ವಲ್ಪ ನಿಲ್ಲುತ್ತೇವೆಯೋ, ಅಲ್ಲಿ (ಎರಡು ಶಬ್ದಗಳ ನಡುವೆ) ಅಲ್ಪವಿರಾಮವನ್ನು ಕೊಡಲಾಗಿದೆ. ದೊಡ್ಡ ಶಬ್ದಗಳ ಉಚ್ಚಾರಕ್ಕಾಗಿ ಸಂಧಿವಿಗ್ರಹವನ್ನು (ಬಿಡಿಸುವುದು) ಮಾಡಲಾಗಿದೆ, ಅಲ್ಲಿ ಅಲ್ಪವಿರಾಮವನ್ನು ಕೊಡಲಾಗಿದೆ; ಆದರೆ ಶಬ್ದಗಳ ನಡುವೆ ಅಂತರವನ್ನು ಇಟ್ಟಿಲ್ಲ. ಇದರಿಂದಾಗಿ ಉಚ್ಚಾರವನ್ನು ಮಾಡಲು ಸುಲಭವಾಗಬಹುದು. (ರಾಮರಕ್ಷಾಸ್ತೋತ್ರವನ್ನು ಮೊದಲು ಸಂಸ್ಕೃತದಲ್ಲಿ, ನಂತರ ಕನ್ನಡದಲ್ಲಿ ಕೊಡಲಾಗಿದೆ.)

ಶಬ್ದಗಳ ಮೂಲಕ ಉಚ್ಚಾರವನ್ನು ಸಂಪೂರ್ಣವಾಗಿ ತಿಳಿದುಕೊಳ್ಳುವುದು ಅಸಾಧ್ಯವಾಗಿದೆ. ಸುಲಭ ನಿಯಮವೆಂದರೆ ಆ, ಈ, ಊ ಇವುಗಳ ಉಚ್ಚಾರ ವನ್ನು ಉದ್ದೇಶಪೂರ್ವಕವಾಗಿ ಸ್ವಲ್ಪ ದೀರ್ಘವಾಗಿ ಎಳೆಯಬೇಕು.

ಶ್ಲೋಕಗಳ ಅರ್ಥವನ್ನು ಕೊನೆಯಲ್ಲಿ ಕೊಡಲಾಗಿದೆ. ಪ್ರತಿಯೊಂದು ಶಬ್ದದ ಮತ್ತು ಶ್ಲೋಕದ ಅರ್ಥವನ್ನು ಸರಿಯಾಗಿ ತಿಳಿದುಕೊಂಡಲ್ಲಿ ಉಚ್ಚಾರವು ಭಾವ ಪೂರ್ಣವಾಗುವುದು. ಎಲ್ಲ ಅರ್ಥವು ಸರಿಯಾಗಿ ನೆನಪಿನಲ್ಲಿ ಉಳಿದರೆ ನಂತರ ಅರ್ಥವನ್ನು ಓದುವ ಆವಶ್ಯಕತೆ ಇರುವುದಿಲ್ಲ. ಈ ಕಿರುಗ್ರಂಥದಲ್ಲಿ ಕೊಟ್ಟಿರುವ ಸ್ತೋತ್ರಗಳನ್ನು ಪಠಿಸುವವರಿಗೆ ಅವುಗಳಿಂದ ಆದಷ್ಟು ಹೆಚ್ಚು ಆಧ್ಯಾತ್ಮಿಕ ಲಾಭವಾಗಲಿ ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ. – ಸಂಕಲನಕಾರರು


**ದೇವತೆಗಳ ಉಪಾಸನೆಯ ಹಿಂದಿನ ಶಾಸ್ತ್ರ ತಿಳಿಸುವ ಕಿರುಗ್ರಂಥ !**

**ಶ್ರೀರಾಮ**



- 卐 ‘ರಾಮಾಯಣ’ ಶಬ್ದದ ವ್ಯುತ್ಪತ್ತಿ ಮತ್ತು ಅದರ ಅರ್ಥ
- 卐 ಶ್ರೀರಾಮನ ಕೆಲವು ಹೆಸರುಗಳು ಮತ್ತು ಪರಿವಾರ
- 卐 ರಾಮಾಯಣದ ಕೆಲವು ಪ್ರಸಂಗಗಳ ಭಾವಾರ್ಥ
- 卐 ಶ್ರೀರಾಮನ ಉಪಾಸನೆಯಲ್ಲಿ ಬರುವ ಕೆಲವು ಕೃತಿಗಳು


‘ಧರ್ಮ ಉಳಿದರೆ ಮಾತ್ರ ರಾಷ್ಟ್ರ ಉಳಿಯುವುದು ಮತ್ತು ರಾಷ್ಟ್ರ ಉಳಿದರೆ ಮಾತ್ರ ಸಂಸ್ಕೃತಿ ಉಳಿಯುವುದು !’ – **(ಪರಾತ್ಪರ ಗುರು) ಡಾ. ಆಠವಲೆ**